# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

**ತರಗತಿ - 8**

State Council of Educational and Research and Training (SCERT), Kerala.

# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.

**ನಿರ್ದೇಶಕರು,**

**SCERT, ಕೇರಳ**

ಅಧ್ಯಾಪಕ ಬಂಧುಗಳೆ / ವಿದ್ಯಾರ್ಥಿಗಳೆ,

ಕೋವಿಡ್ ಮಹಾಮಾರಿ ತನ್ನ ಕಬಂಧ ಬಾಹುಗಳನ್ನು ಜಗತ್ತಿನ ಪ್ರತಿಯೊಂದರ ಮೇಲೆಯೂ ಚಾಚಿ ತನ್ನ ಗಾಢ ಪರಿಣಾಮವನ್ನು ಬೀರಿತು. ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ, ಕಲಿಕೆಯ ಸಾಮರ್ಥ್ಯ ಮತ್ತು ಏಕಾಗ್ರತೆಯ ಕುಸಿತಕ್ಕೂ ಇದು ಕಾರಣವಾಯಿತು.

ಆದುದರಿಂದ ಕೇರಳದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಮತ್ತು ಕಲಿಕೆಯ ಸಾಮರ್ಥ್ಯದ ನೈಜ ವಿಚಾರಗಳನ್ನು ತಿಳಿಯಲು 2022-23 ಅಧ್ಯಯನ ವರ್ಷದ ವಿದ್ಯಾರ್ಥಿಗಳ ಕಾಲುವಾರ್ಷಿಕ ಮೌಲ್ಯಮಾಪನದ ಉತ್ತರ ಪತ್ರಿಕೆಗಳ ವೈಜ್ಞಾನಿಕ ವಿಶ್ಲೇಷಣೆ ನಡೆಸಲು SCERT ನೇತೃತ್ವದಲ್ಲಿ ತೀರ್ಮಾನಿಸಲಾಗಿದೆ.

ವಿದ್ಯಾರ್ಥಿಗಳ ಆಲಸ್ಯವನ್ನು ದೂರಮಾಡಿ, ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿ ಅವರ ಮಸುಕಾದ ಜ್ಞಾನವನ್ನು ಪ್ರಜ್ವಲಿಸುವಂತೆ ಮಾಡುವ ಜವಾಬ್ದಾರಿ ಅಧ್ಯಾಪಕರಾದ ನಮ್ಮ ಮೇಲಿದೆ. ಅದಕ್ಕಾಗಿ ತರಗತಿಯಲ್ಲಿ ಕ್ರಿಯಾತ್ಮಕವಾದ ಬೋಧನೆ–ಕಲಿಕೆಯ ಚಟುವಟಿಕೆಗಳನ್ನು ಆವಿಷ್ಕರಿಸಲು ಮತ್ತು ಸಮರ್ಪಣಾ ಭಾವದಿಂದ ಅವುಗಳನ್ನು ಅನುಷ್ಠಾನಗೊಳಿಸಲು ನಾವು ಸಿದ್ಧರಾಗೋಣ ಎಂದು ಹಾರೈಸೋಣ.

**8 ನೇ ತರಗತಿಯ ಮೌಲ್ಯಮಾಪನ ವಿಶ್ಲೇಷಣೆಗೆ ಒಳಪಡಿಸಿದ ಕನ್ನಡ ಉತ್ತರ ಪತ್ರಿಕೆಗಳು-107**

| | | |
|---|---|---|
| A+ ಗ್ರೇಡ್ ಲಭಿಸಿದವರು | = 9 | 8.41% |
| A ಗ್ರೇಡ್ ಲಭಿಸಿದವರು | = 5 | 4.67% |
| B+ ಗ್ರೇಡ್ ಲಭಿಸಿದವರು | = 5 | 4.67% |
| B ಗ್ರೇಡ್ ಲಭಿಸಿದವರು | = 13 | 12.14% |
| C+ ಗ್ರೇಡ್ ಲಭಿಸಿದವರು | = 22 | 20.56% |
| C ಗ್ರೇಡ್ ಲಭಿಸಿದವರು | = 9 | 8.4% |
| D+ ಗ್ರೇಡ್ ಲಭಿಸಿದವರು | = 17 | 15.86% |
| BELOW | = 27 | 25.23% |

# ತರಗತಿ : VIII

## ಪತ್ರಿಕೆ - ಕನ್ನಡ AT

**ಪ್ರಶ್ನೆ - 1**

8 ನೆಯ ಕನ್ನಡ ಪಾಠಾವಳಿಯ ಕಾಲುವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಯ ಕೆಲವು ಉತ್ತರಗಳ ವಿಶ್ಲೇಷಣೆ:-

ಉತ್ತರ ಪತ್ರಿಕೆಗಳನ್ನು ಈ ಕೆಳಗಿನ ನಾಲ್ಕು ಮುಖ್ಯ ವಿಚಾರಗಳ ಆಧಾರದಲ್ಲಿ ವಿಶ್ಲೇಷಣೆ ಮಾಡುವುದು.

- ವಿದ್ಯಾರ್ಥಿಗಳಲ್ಲಿ ಕಂಡು ಬರುವ ಭಾಷಾಪರವಾದ ದೋಷಗಳು.
- ವ್ಯಾಕರಣ ದೋಷಗಳು.
- ಭಾಷಾ ವ್ಯವಹಾರ ರೂಪಗಳ ಆಶಯ ಮತ್ತು ಸ್ವರೂಪಗಳ ಕುರಿತಾದ ಮಾಹಿತಿಯ ಕೊರತೆ.
- ಆಸ್ವಾದನೀಯ ಅಂಶಗಳ ಕುರಿತು ವಿದ್ಯಾರ್ಥಿಗಳಿಗೆ ಸರಿಯಾದ ತಿಳುವಳಿಕೆ / ಮಾಹಿತಿ ಇಲ್ಲದಿರುವುದು.

**ಪ್ರಶ್ನೆ 4-**

ಕೊಟ್ಟಿರುವ ಪದವನ್ನು ಉಪಯೋಗಿಸಿ ವಾಕ್ಯ ರಚನೆ.

- ಭಾಷಾ ಪರವಾದ ದೋಷಗಳು : ಸಮರೂಪ ಅಕ್ಷರಗಳ ವ್ಯತ್ಯಾಸ ತಿಳಿಯದಿರುವುದು.
  ಉದಾ:- ಒ - ಬ, ದ – ಡ
- ಉಚ್ಚಾರಣಾ ದೋಷ: ಕಳೆದು-ಕಲೆದು
- ಹ್ರಸ್ವ-ದೀರ್ಘದ ವ್ಯತ್ಯಾಸ ತಿಳಿಯದಿರುವುದು:
  ಎಂದರೆ-ಎಂದರೇ,
  ಮೂಡಿಸಲು-ಮುಡಿಸಲು

**ಪ್ರಶ್ನೆ11-**

**ವ್ಯಾಕರಣ ದೋಷಗಳು:**

- ವಾಕ್ಯ ಆರಂಭ- ಬಹುವಚನ, ಮುಕ್ತಾಯ ಏಕವಚನ.
  (ಜೀವಜಾಲಗಳು................ನಾಶವಾಗುತ್ತಿದೆ).
- ವ್ಯವಹಾರ ರೂಪದಲ್ಲಿನ ದೋಷಗಳು:

**ಪ್ರಶ್ನೆ13-**

**ಆಸ್ವಾದನಾ ಟಿಪ್ಪಣಿ**

**ಭಾಷಾ ಪರವಾದ ಅಂಶಗಳು:** ಅಕ್ಷರ ತಪ್ಪುಗಳು, ಹ್ರೃಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣಗಳ ತಿಳುವಳಿಕೆಯ ಕೊರತೆ.

**ವ್ಯಾಕರಣಾಂಶಗಳು:** ವಾಕ್ಯ ರಚನೆಯಲ್ಲಿ ದೋಷಗಳು, ವಿಭಕ್ತಿ ಪ್ರತ್ಯಯಗಳ ತಿಳುವಳಿಕೆಯ ಕೊರತೆ.

**ಭಾಷಾ ವ್ಯವಹಾರ ರೂಪ:** ಆಸ್ವಾದನಾ ಟಿಪ್ಪಣಿಯ ಸ್ವರೂಪದ ಅರಿವಿನ ಕೊರತೆ.

ಆಸ್ವಾದನೀಯ ಅಂಶಗಳು: ಪ್ರಧಾನ ಆಶಯದ ಪ್ರಕಟಣೆ, ವಿಶೇಷ ಪದ, ಸಾಲುಗಳ ಗುರುತಿಸುವಿಕೆ, ರಾಗ, ಲಯ, ತಾಳಗಳ ಕುರಿತಾದ ಪರಾಮರ್ಶೆ, ಕವಿಯ ವರ್ಣನೆ ಮುಂತಾದ ವಿಚಾರಗಳನ್ನು ವಿದ್ಯಾರ್ಥಿಗಳು ಗುರುತಿಸುವಲ್ಲಿ ಪೂರ್ಣತೆಯನ್ನು ಸಾಧಿಸಿರುವಂತೆ ಕಾಣುವುದಿಲ್ಲ.

**ಪ್ರಶ್ನೆ14-**

**ಗೆಳತಿಗೆ ಪತ್ರ-**

- ಪತ್ರದ ಸ್ವರೂಪ ವ್ಯಕ್ತಪಡಿಸದಿರುವುದು.
- ಖಾಸಗಿ ಪತ್ರ ಔಪಚಾರಿಕ ಪತ್ರ (ಅರ್ಜಿಗಳು)ಗಳ ಕುರಿತಾದ ಸ್ವರೂಪಗಳ ಅರಿವು ಇಲ್ಲದಿರುವುದು.
- ಪ್ರಧಾನ ಆಶಯದ ಅಭಿವ್ಯಕ್ತಿ ಕಂಡುಬರುವುದಿಲ್ಲ.

**ಪ್ರಶ್ನೆ15-**

**ಕರಪತ್ರ**

ಹೆಚ್ಚಿನ ವಿದ್ಯಾರ್ಥಿಗಳು ಉತ್ತರ ಬರೆದಿರುವುದಿಲ್ಲ. ಬಹುಶ: ಬಹು ಆಯ್ಕೆಯ ಪ್ರಶ್ನೆಗಳಿರುವಾಗ ಆ ಪ್ರಶ್ನೆಗೆ ಉತ್ತರವನ್ನು ಬರೆಯದಿರಬಹುದು. ಆದರೆ ಬರೆದ ಉತ್ತರಗಳಲ್ಲಿ ಹೆಚ್ಚಿನ ಪತ್ರಿಕೆಗಳು ಕರಪತ್ರದ ಸ್ವರೂಪ, ಪ್ರಧಾನ ಆಶಯ (ಸಾವಯವ ಕೃಷಿಯ ಮಹತ್ವ) ವನ್ನು ಉಲ್ಲೇಖಿಸಿರುವುದಿಲ್ಲ.

**ಪ್ರಶ್ನೆ16-**

**ಪ್ರಬಂಧ**

A+ ಪಡೆದಿರುವ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯಲ್ಲಿನ ಉತ್ತರಗಳು ನಿರಾಶಾದಾಯಕವಾಗಿದೆ. ಪ್ರಬಂಧದ ಸ್ವರೂಪ (ಪೀಠಿಕೆ, ವಿಷಯ ವಿಸ್ತಾರ, ಉಪಸಂಹಾರ, ಮುಕ್ತಾಯಗಳು) ಇಲ್ಲ.

ಪ್ರಶ್ನೆಯಲ್ಲಿನ ಪ್ರಧಾನ ಆಶಯಗಳು, ವಿದ್ಯಾರ್ಥಿಯ ಚಿಂತನೆಗಳು, ನಿಗಮನಗಳು ಕಂಡುಬರುವುದಿಲ್ಲ. ತರಗತಿಯಲ್ಲಿ ಇಂತಹ ಚಟುವಟಿಕೆಗಳು ಪ್ರಕ್ರಿಯಾಧಾರಿತವಾಗಿ ನಡೆಯದಿರುವುದೇ ಕಾರಣವಾಗಿರಬಹುದೆಂದು ಊಹಿಸಬಹುದೇ?

ವಿದ್ಯಾರ್ಥಿಗಳಲ್ಲಿ ಕಲಿಕಾ ಗುಣಮಟ್ಟವನ್ನು ಕಾಯ್ದುಕೊಂಡು ಅವರಲ್ಲಿ ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಸೃಜನಶೀಲತೆಯನ್ನು ಬೆಳೆಸುವುದು ಭಾಷಾ ಸಂಬಂಧಿತವಾದ ಕಲಿಕೆಯಲ್ಲಿ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತಕ್ಕೆ ತಲುಪುವಾಗ ಭಾಷಾ ಕಲಿಕೆಯ ಮೂಲಕ ಆ ಭಾಷೆಯನ್ನು ಸುಲಲಿತವಾಗಿ ಬಳಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಭಾಷೆಯ ವಿಶೇಷತೆ, ವ್ಯಾಕರಣ, ವ್ಯವಹಾರ ರೂಪಗಳು, ಆಶಯ, ಸ್ವರೂಪ, ಆಸ್ವಾದನೆ ಇತ್ಯಾದಿಗಳನ್ನು ಸ್ಪಷ್ಟವಾಗಿ ತಿಳಿಯುವಂತಾಗಬೇಕು. ಅಕ್ಷರಗಳನ್ನು ತಪ್ಪಿಲ್ಲದಂತೆ ಬರೆಯುವ, ಉಚಿತವಾದ ವಾಕ್ಯ ರಚನೆಯನ್ನು ಮಾಡುವ, ಶಬ್ದ ಭಂಡಾರವನ್ನು ಬಳಸಿಕೊಳ್ಳುವ ಭಾಷಿಕ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು.

ಪ್ರೌಢಶಾಲಾ ಹಂತದಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳು ಸಾಹಿತ್ಯ ರೂಪಗಳನ್ನು ಸ್ವತಂತ್ರವಾಗಿ ಓದಿ, ಅರ್ಥೈಸಿಕೊಂಡು ಅದರ ಆಶಯವನ್ನು ಗ್ರಹಿಸಿ, ಮೌಖಿಕವಾಗಿ ಮತ್ತು ಲಿಖಿತವಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗಬೇಕು. ವಿವಿಧ ವ್ಯವಹಾರ ರೂಪಗಳನ್ನು ಸಮರ್ಥವಾಗಿ ಸಂದರ್ಭೋಚಿತವಾಗಿ ಬಳಸಿಕೊಳ್ಳುವುದಕ್ಕೆ ಪ್ರಾಪ್ತರಾಗಬೇಕು. ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು, ನಿಗಮನಗಳನ್ನು, ಚಿಂತನೆಗಳನ್ನು ವಿವಿಧ ಭಾಷಾ ವ್ಯವಹಾರ ರೂಪಗಳಲ್ಲಿ ಸೃಜನಾತ್ಮಕವಾಗಿ ಅಭಿವ್ಯಕ್ತಗೊಳಿಸಲು ಸಮರ್ಥರಾಗಬೇಕು.

ಕಳೆದೆರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಕಲಿಕಾ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ, ಪ್ರಸ್ತುತ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ತರಗತಿಯ ಕಲಿಕಾ ಮಟ್ಟವನ್ನು ತಲುಪಲು ವಿಫಲರಾಗಿರುವುದು ಗೋಚರವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಕಲಿಕಾ ಅಂತರ ಮತ್ತು ಕಲಿಕಾ ಗುಣಮಟ್ಟದ ಕುಸಿತ, ಭಾಷೆಯ ಬಳಕೆಯಲ್ಲಿ ಅಸಮರ್ಪಕತೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಂಟು, ಒಂಬತ್ತು, ಮತ್ತು ಹತ್ತನೇ ತರಗತಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವ ವಿದ್ಯಾರ್ಥಿಗಳಲ್ಲಿ ಭಾಷಾ ಕಲಿಕೆಯಲ್ಲಿ ಉಂಟಾದ ಕಲಿಕಾ ಗುಣಮಟ್ಟದ ಕುಸಿತ ಮತ್ತು ದೋಷಗಳಿಗೆ ಕಾರಣಗಳನ್ನು ಕಂಡುಕೊಂಡು ಅದಕ್ಕೆ ಪರಿಹಾರವನ್ನು ಕಾಣುವ ಅನಿವಾರ್ಯತೆ ಎದುರಾಯಿತು.

ಈ ತರಗತಿಗಳಲ್ಲಿ ಕನ್ನಡ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ಭಾಷಾ ಕಲಿಕೆಯ ಗುಣಮಟ್ಟದ ಕೊರತೆ ಮತ್ತು ಭಾಷಿಕ ದೋಷಗಳನ್ನು ಕಂಡುಕೊಳ್ಳಲು ಸೂಚಿತ ತರಗತಿಗಳ ಕಾಲು ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ತರಗತಿವಾರು ವಿಶ್ಲೇಷಣೆಗೆ

ಒಳಪಡಿಸಲಾಯಿತು. ವಿಶ್ಲೇಷಣೆ ನಡೆಸುವಾಗ ಗ್ರೇಡ್ ವಾರು ಮತ್ತು ಪ್ರಶ್ನಾನುಸಾರವಾಗಿ ಗಮನಿಸಲಾಗಿದೆ. ವಿಶ್ಲೇಷಣೆಯಲ್ಲಿ ಈ ಕೆಳಗಿನ ಅಂಶಗಳನ್ನು ಕಂಡುಕೊಳ್ಳಲಾಯಿತು.

- ಸಮರೂಪ ಅಕ್ಷರಗಳ ವ್ಯತ್ಯಾಸ ತಿಳಿಯದಿರುವುದು.
- ಉಚ್ಚಾರಣೆಯ ದೋಷ ಬರವಣಿಗೆಯಲ್ಲಿ ಕಂಡು ಬರುವುದು.
- ಹ್ರಸ್ವ -ದೀರ್ಘ ವ್ಯತ್ಯಾಸ ತಿಳಿಯದಿರುವುದು.
- ವಾಕ್ಯಾರಂಭದಲ್ಲಿ ಬಹುವಚನ- ಮುಕ್ತಾಯ ಏಕವಚನದಲ್ಲಿ.
- ಪತ್ರ ಬರವಣಿಗೆಯಲ್ಲಿ ಪತ್ರದ ಸ್ವರೂಪ ತಿಳಿಯದಿರುವುದು.
- ಖಾಸಗಿ ಪತ್ರ ಮತ್ತು ಔಪಚಾರಿಕ ಪತ್ರಗಳ ಕುರಿತಾದ ಸ್ವರೂಪಗಳ ಅರಿವು ಇಲ್ಲದಿರುವುದು.
- ಪತ್ರದ ವಿಷಯ ಪ್ರಸ್ತಾಪನೆಯ ಭಾಗದಲ್ಲಿ ಪ್ರಧಾನ ಆಶಯದ ಅಭಿವ್ಯಕ್ತಿ ಕಂಡುಬರುವುದಿಲ್ಲ.
- ನಿರ್ದಿಷ್ಟ ಪ್ರಶ್ನೆಗಳಿಗೆ ಹೆಚ್ಚಿನ ವಿದ್ಯಾರ್ಥಿಗಳು ಉತ್ತರಿಸದೇ ಇರುವುದು.
- ಕರಪತ್ರದಂತಹ ವ್ಯವಹಾರ ರೂಪದಲ್ಲಿ ಸ್ವರೂಪ, ಕೊಟ್ಟಿರುವ ವಿಷಯದ ಆಶಯವನ್ನು ಉಲ್ಲೇಖಿಸದಿರುವುದು.
- ಪ್ರಬಂಧದ ಸ್ವರೂಪ ತಿಳಿಯದಿರುವುದು, ಪ್ರಧಾನ ಆಶಯ, ಸ್ವ-ಚಿಂತನೆ, ನಿಗಮನ ಕಂಡುಬರುವುದಿಲ್ಲ.
- ಅಕ್ಷರ ತಪ್ಪುಗಳು, ಅಲ್ಪಪ್ರಾಣ-ಮಹಾ ಪ್ರಾಣ ಅಕ್ಷರಗಳಲ್ಲಿನ ಗೊಂದಲ.
- ವಾಕ್ಯ ರಚನೆಯಲ್ಲಿ ದೋಷಗಳು, ವಿಭಕ್ತಿ ಪ್ರತ್ಯಯಗಳ ತಿಳುವಳಿಕೆ ಇಲ್ಲದಿರುವುದು.
- ಆಸ್ವಾದನಾ ಟಿಪ್ಪಣಿಯ ಸ್ವರೂಪ ತಿಳಿಯದಿರುವುದು, ಪ್ರಧಾನ ಆಶಯದ ಪ್ರಕಟಣೆ, ವಿಶೇಷ ಪದ ಸಾಲುಗಳ ಗುರುತಿಸುವಿಕೆ, ವರ್ಣಿತ ವಿಚಾರಗಳು ಮುಂತಾದವುಗಳನ್ನು ಗುರುತಿಸುವಲ್ಲಿ ವಿದ್ಯಾರ್ಥಿಗಳು ವಿಫಲವಾಗಿರುವುದು.

ಎಂಟನೇ ತರಗತಿಯ ವಿದ್ಯಾರ್ಥಿಗಳ ಭಾಷಾ ಪತ್ರಿಕೆಗಳನ್ನು ಗಮನಿಸಿದಾಗ ಶೇಕಡ 50 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು, ವಿಶ್ಲೇಷಣೆಗೆ ಅಳವಡಿಸಿಕೊಂಡ ನಾಲ್ಕು ಮಾನದಂಡಗಳಲ್ಲಿಯೂ ಹಿಂದುಳಿದಿರುವುದನ್ನು ಕಾಣಬಹುದು.

ಭಾಷಾ ಪ್ರಯೋಗದಲ್ಲಿನ ದೋಷಗಳು, ವ್ಯಾಕರಣ ದೋಷಗಳು, ಬರವಣಿಗೆ, ಓದುವ ದೋಷಗಳನ್ನು ಪರಿಹರಿಸಲು ತರಗತಿಗಳಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಪಠ್ಯಕ್ಕೆ ಪೂರಕವಾಗಿ ಮತ್ತು ಮುಂದುವರಿದ ಚಟುವಟಿಕೆಗಳಾಗಿ ನಡೆಸುವುದು ಸೂಕ್ತ.

ಚಟುವಟಿಕೆಗಳು ಹೀಗೂ ಮಾಡಬಹುದು.

| ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|
| 1.ಎಲ್ಲಾ ಮಕ್ಕಳಿಗೂ ಸರಳ ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.<br>2.ಕನ್ನಡ ಭಾಷೆಯಲ್ಲಿ ಓದಲು ಬರೆಯಲು ವ್ಯವಹರಿಸಲು ಸಾಧ್ಯವಾಗಬೇಕು. | • ಪುಸ್ತಕಗಳನ್ನು ಸಂಗ್ರಹಿಸುವುದು<br>• ಆಸ್ವಾದನೆ<br>• ಓದುವಿಕೆ<br>• ಬರವಣಿಗೆ<br>• ಸ್ಪರ್ಧೆಗಳು | ಜುಲೈ<br>ಆಗಸ್ಟ್<br>ಸೆಪ್ಟಂಬರ್&<br>ಒಕ್ಟೋಬರ್<br>ನವಂಬರ್<br>ಜನವರಿ & ಫೆಬ್ರವರಿ | ಕನ್ನಡ ಭಾಷಾ ಅಧ್ಯಾಪಕರು/ ತರಗತಿಯಲ್ಲಿರುವ ವಿದ್ಯಾರ್ಥಿಗಳ ಹೆತ್ತವರು |

ಉತ್ತಮ ಓದು

ಉದ್ದೇಶ :- ಎಲ್ಲಾಮಕ್ಕಳಿಗೂ ಸರಳ ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.

ಚಟುವಟಿಕೆಗಳು:-

ಆಯ್ಕೆ ಮಾಡಿದ ಸರಳವಾದ

105 ಪುಸ್ತಕಗಳು

30 ಕನ್ನಡ ಕಥೆ ಪುಸ್ತಕ

20 ಕನ್ನಡ ಚಿತ್ರಕಥೆ ಪುಸ್ತಕ

15 ಕನ್ನಡ ಪದ್ಯ ಚುಟುಕು ಪುಸ್ತಕ

30 ಆತ್ಮಕಥೆ, ಜೀವನ ಚರಿತ್ರೆ, ಪ್ರವಾಸ ಕಥನ, ಕಥನ ಕವನ, ದಿನಚರಿ, ಪತ್ರ, ಪ್ರಬಂಧ, ನಾಟಕ ಇತ್ಯಾದಿ

5 ರಸಪ್ರಶ್ನೆ ಪುಸ್ತಕ

ಸಂಗ್ರಹಿಸುವುದು ಹೇಗೆ?

- ಒಂದೊಂದು ಪುಸ್ತಕ ಪ್ರತಿ ಮಗುವಿನಿಂದ, ಅಧ್ಯಾಪಕರಿಂದ ಹೆತ್ತವರಿಂದ, ಹಳೆ ವಿದ್ಯಾರ್ಥಿಗಳಿಂದ, ಹಿತೈಷಿಗಳಿಂದ, ಮನೆ ಸಂದರ್ಶನ ಮೂಲಕ.
- ಬೇರೆ ಯಾವುದಾದರೂ ಪ್ರಾಯೋಜಕತ್ವದಲ್ಲಿ ಪುಸ್ತಕ ಖರೀದಿಸುವುದು.

ಚಟುವಟಿಕೆ :- (ಆಲಿಸುವಿಕೆ ,ಮಾತನಾಡುವಿಕೆ, ಓದುವಿಕೆ L, S & R)

ಕನ್ನಡ ಪಿರೇಡ್ ಗಳಲ್ಲಿ ಮೊದಲ ಐದು ನಿಮಿಷ ಒಂದು ಮಗುವಿನಿಂದ ಗಟ್ಟಿಯಾಗಿ ಒಂದು ಪುಟ ಓದಿಸುವುದು. ಓದಿದ ಪುಸ್ತಕಗಳ ಹೆಸರು ಬರೆದಿಡಲು ಒಂದು ಪುಸ್ತಕ ಬೇಕು. ತರಗತಿಯ ಓದುವ ಮೂಲೆಯಲ್ಲಿ ಸಾಕಷ್ಟು ಪುಸ್ತಕಗಳನ್ನು ಒದಗಿಸುವುದು. ಹೆಚ್ಚು ಪುಸ್ತಕಗಳನ್ನು ಓದಿದ ವಿದ್ಯಾರ್ಥಿ/ ವಿದ್ಯಾರ್ಥಿನಿಗೆ ಬಹುಮಾನ ನೀಡುವುದು.

ಉತ್ತಮ ಬರವಣಿಗೆ

ಉದ್ದೇಶ: ಎಲ್ಲ ಮಕ್ಕಳು ಪದ ವಾಕ್ಯಗಳನ್ನು ಬರೆಯಲು ಸಾಧ್ಯವಾಗಬೇಕು.

ವೈವಿಧ್ಯಪೂರ್ಣವಾದ ಬರವಣಿಗೆ ಚಟುವಟಿಕೆಗಳು.

ಉದಾ:

- ಕಥೆ, ಕವನ, ಪ್ರಬಂಧ, ದಿನಚರಿ, ಲೇಖನ ಇತ್ಯಾದಿ
- ತರಗತಿ ಸಂಚಿಕೆ ತಯಾರಿ.
- ಭಿತ್ತಿಪತ್ರಿಕೆ ತಯಾರಿ.
- ಓದುವ ಕಾರ್ಡ್ ತಯಾರಿ.
- ಮಾದರಿಕೊಟ್ಟು ಸ್ಪರ್ಧೆ ನಡೆಸಿ ಉತ್ತಮವಾದುದನ್ನು ಕಂಡುಹಿಡಿದು ಸರಿಪಡಿಸಿ ಏ 4 ಶೀಟ್ ಕೊಟ್ಟು ಚಂದವಾಗಿ ಬರೆದು ಚಿತ್ರ ಬಿಡಿಸಿ, ಬಣ್ಣ ಹಚ್ಚಿ ಲ್ಯಾಮಿನೇಷನ್ ಮಾಡಿ ಓದುವ ಕಾರ್ಡ್ ತಯಾರಿಸುವುದು.
- ವೈಯಕ್ತಿಕವಾಗಿ 'ನನ್ನ ಪುಸ್ತಕ' ತಯಾರಿ. (ಕಥೆ, ಕವನ, ಚುಟುಕು, ಪ್ರಬಂಧ ಇತ್ಯಾದಿಗಳ ಸಂಗ್ರಹ)

ಪ್ರತಿಭಾವಂತರಿಗೆ

- ಹಾಡನ್ನು ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಆಯ್ಕೆ ಮಾಡಿ ಇತರ ಮಕ್ಕಳ ಮುಂದೆ ಅವರ ಪ್ರತಿಭೆಯನ್ನು ಪ್ರಕಟಪಡಿಸಿ ಅವರಿಗೆ ಕೇಳಲೂ, ಆಸ್ವಾದಿಸಲೂ ಅವಕಾಶ ಲಭಿಸುವಂತೆ ಎರಡು ವಾರಕ್ಕೊಮ್ಮೆ ಸಾಹಿತ್ಯ/ ಬಾಲಸಭೆ ಸೇರುವುದು.
- ಮೊದಲೇ ಯೋಜನೆ ಮಾಡಬೇಕು.
- ಒಮ್ಮೆ ಹಾಡಿದ / ಹೇಳಿದ ಮಕ್ಕಳನ್ನು ಸಭೆಗೆ ಕೇಳುಗರಾಗಿಸಬೇಕು. ಮೊದಲ ಸಭೆಯಲ್ಲಿ ಕೇಳುಗರಾದವರು ನಂತರದ ಸಭೆಗೆ ಹಾಡುವವರಾಗಬೇಕು.
- ಇದೇ ರೀತಿ ಸೃಜನಶೀಲ ಹವ್ಯಾಸಗಳನ್ನು ಪ್ರೋತ್ಸಾಹಿಸುವುದು.
- ಪ್ರೊಜೆಕ್ಟರ್ ಉಪಯೋಗಿಸಿ 10 ಕಥೆಗಳು / ಪದ್ಯ / ತಮಾಷೆ ಚಿತ್ರಗಳ ವಿಡಿಯೋ ತೋರಿಸಬೇಕು.

ಉದಾ:- ತೆನಾಲಿ ರಾಮನ ಕಥೆಗಳು, ಪಂಚತಂತ್ರ ಕಥೆಗಳು.

- ಅವುಗಳನ್ನು ಸ್ವತಂತ್ರವಾಗಿ ಅಭಿನಯಿಸಲು ಪ್ರೋತ್ಸಾಹಿಸುವುದು.

<u>ಉತ್ತಮ ಕಲಿಕೆಗೆ ಏನೇನು?</u>

- ರಸಪ್ರಶ್ನೆ
- ಪದ ತಯಾರಿ
- ಪಾತ್ರಾಭಿನಯ
- ಕಥೆ ಪೂರ್ತಿಗೊಳಿಸುವುದು / ಕಥಾ ರಚನೆ
- ಪದ್ಯ ಪೂರ್ತಿಗೊಳಿಸುವುದು / ಪದ್ಯ ರಚನೆ
- ಪದಬಂಧ
- ನೆನಪು ಶಕ್ತಿ ಪರೀಕ್ಷೆ
- ಬಣ್ಣ ಹಚ್ಚುವುದು
- ಪದ್ಯ ಹಾಡುವುದು / ಕಂಠಪಾಠ
- ಅಭಿನಯ ಗೀತೆ
- ಕಥೆ ಹೇಳುವುದು / ಕಥೆ ಓದಿ ಚಿತ್ರರಚನೆ
- ಕಾವ್ಯ ಪಾರಾಯಣ
- ಪದಬಂಡಿ / ಪದ್ಯಬಂಡಿ / ವಾಕ್ಯ ಬಂಡಿ
- ಒಗಟುಗಳು / ಒಗಟು ರಚನೆ
- ಸಂಭಾಷಣೆ / ಸಂಭಾಷಣೆ ರಚನೆ
- ನೃತ್ಯ
- ಪ್ರೊಜೆಕ್ಟರ್ ಮೂಲಕ ತೆನಾಲಿ ರಾಮನ ಕಥೆಗಳನ್ನು ತೋರಿಸುವುದು
- ಬೀರಬಲ್ ಕಥೆಗಳು ಮತ್ತು ಇತರ ಕಥೆಗಳು
- ಉತ್ತಮವಾದ ಪದ್ಯಗಳನ್ನು ಕೇಳಿಸುವುದು.

1. <u>ಆಲಿಸುವಿಕೆ ಸ್ಪರ್ಧೆ</u>:-

- ಪ್ರೊಜೆಕ್ಟರ್ ನಲ್ಲಿ ಒಂದು ಕಥೆ ತೋರಿಸುವುದು / ಕಥೆ ಹೇಳುವುದು.
- ಬಳಿಕ ಆ ಕಥೆಗೆ ಸಂಬಂಧಿಸಿದ ಹತ್ತು ಪ್ರಶ್ನೆಗಳನ್ನು ಕೇಳುವುದು.
- ಮಕ್ಕಳಿಗೆ ಪೇಪರ್ ಕೊಟ್ಟು ಅದರಲ್ಲಿ ಉತ್ತರಿಸಲು ಹೇಳುವುದು.
- ಕನ್ನಡ ಅಧ್ಯಾಪಕರು ಸ್ಪರ್ಧೆ ನಡೆಸುವುದು.
- ಯಾರು ಹೆಚ್ಚು ಉತ್ತರಿಸುತ್ತಾರೋ ಅವರು ಜಯಶಾಲಿಗಳಾಗುತ್ತಾರೆ.

2. ಮಾತನಾಡುವಿಕೆ:-

- ಒಂದು ವಿಷಯ ಕೊಟ್ಟು ಆ ವಿಷಯಕ್ಕೆ ಸಂಬಂಧಿಸಿ ಐದು ನಿಮಿಷ ಮಾತನಾಡಲು ಹೇಳುವುದು.
- ಕಥೆ ಹೇಳಲು ಹೇಳುವುದು.
- ಪದ್ಯ ಹಾಡಿಸುವುದು.

3. ಓದುವಿಕೆ:-

- ಅಧ್ಯಾಪಕರು ಓದುವ ಕಾರ್ಡ್ ಕೊಡುವುದು.
- ಪ್ರೊಜೆಕ್ಟರ್ ನಲ್ಲಿ ಒಂದು ವಿವರಣೆ ತೋರಿಸುವುದು.
- ಅದನ್ನು ತಪ್ಪಿಲ್ಲದೆ ಗಟ್ಟಿಯಾಗಿ ಸ್ವರ ಏರಿಳಿತಗಳೊಂದಿಗೆ ಓದಲು ಹೇಳುವುದು.
- ಚೆನ್ನಾಗಿ ತಪ್ಪಿಲ್ಲದೆ ಓದಿದ ಮಗುವಿಗೆ ಬಹುಮಾನ ನೀಡುವುದು.

4. ಬರವಣಿಗೆ:-

- ಪ್ರೊಜೆಕ್ಟರ್ ನಲ್ಲಿ ಕೆಲವು ಚಿತ್ರಗಳನ್ನು ತೋರಿಸುವುದು.
- ಅದನ್ನು ನಿರೀಕ್ಷಿಸಿ ಅವುಗಳ ವಿವರಣೆ ಬರೆಯಲು ಹೇಳುವುದು.
- ಪದ್ಯಕ್ಕೆ ಸಾಲು ಸೇರಿಸಲು ಹೇಳುವುದು. ಇತರ ವ್ಯವಹಾರ ರೂಪಗಳನ್ನು ರಚಿಸಲು ಹೇಳುವುದು.

5. ಸ್ಪರ್ಧೆಗಳು:-

- ಆಲಿಸುವಿಕೆ, ಓದುವಿಕೆ, ಬರೆಯುವಿಕೆ ಕಳೆದ ನಂತರ ಸ್ಪರ್ಧೆಗಳನ್ನು ನಡೆಸುವುದು.
- ಕನ್ನಡ ಭಾಷಾ ಅಧ್ಯಾಪಕರು ಇದರ ಜವಾಬ್ದಾರಿಯನ್ನು ವಹಿಸುವುದು.

6. ಸಾಹಿತ್ಯ ಶಿಬಿರಗಳು:-

- ಕಥೆ, ಕವನ, ಲೇಖನ, ಹಾಡುವಿಕೆ, ಅಭಿನಯಕ್ಕಾಗಿ ವಿಶೇಷ ಶಿಬಿರಗಳನ್ನು ನಡೆಸುವುದು.

7. ಪುಸ್ತಕಗಳನ್ನು ಸಂಗ್ರಹಿಸುವುದು:-

- ಕನ್ನಡ ಭಾಷಾ ಅಧ್ಯಾಪಕರ ನೇತೃತ್ವದಲ್ಲಿ ನಡೆಸುವ ಚಟುವಟಿಕೆ ಇದಾಗಿದೆ.
- ಪ್ರತಿಯೊಂದು ಮಗುವಿನಲ್ಲಿಯೂ ಕಡಿಮೆ ಎಂದರೆ ಒಂದು ಪುಸ್ತಕವನ್ನು ಶಾಲೆಗೆ ಕೊಡಲು ಹೇಳುವುದು.

- ಅದೇ ರೀತಿಯಲ್ಲಿ ಶಾಲಾ ಸಿಬ್ಬಂದಿ ವರ್ಗದವರಲ್ಲಿಯೂ ಒಂದೊಂದು ಪುಸ್ತಕ ಕೊಡಲು ಹೇಳುವುದು.
- ಬಳಿಕ ಶಾಲೆಯಿಂದ ನಿವೃತ್ತಿ ಹೊಂದಿದ ಕನ್ನಡ ಅಧ್ಯಾಪಕರಲ್ಲಿ ಅವರ ಮನೆಗೆ ಭೇಟಿ ನೀಡಿ ಪುಸ್ತಕ ತೆಗೆಯಲು, ಸಂಗ್ರಹಿಸಲು ಬೇಕಾದ ಸಹಾಯವನ್ನು ಕೇಳುವುದು.
- ಧನ ಸಹಾಯವಾದರೆ ಹಣ ಸಂಗ್ರಹಿಸಿ ಕನ್ನಡ ಅಧ್ಯಾಪಕರು / ಮುಖ್ಯೋಪಾಧ್ಯಾಯರು ಶಾಲೆಗೆ ಬೇಕಾದ ಪುಸ್ತಕಗಳನ್ನು ಆಯ್ಕೆ ಮಾಡಿ ತರುವುದು.
- ಅಗತ್ಯಬಿದ್ದಲ್ಲಿ ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರನ್ನು ಸೇರಿಸಿಕೊಳ್ಳುವುದು.
- ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರಲ್ಲಿ ಒಂದೊಂದು ಪುಸ್ತಕಗಳನ್ನು ಶಾಲೆಗೆ ಕೊಡುಗೆಯಾಗಿ ನೀಡಲು ಹೇಳುವುದು.

8.ಆಸ್ವಾದನೆ:-

ಹಾಡು ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಆಯ್ಕೆ ಮಾಡಿ ಇತರ ಮಕ್ಕಳ ಮುಂದೆ ಅವರ ಪ್ರತಿಭೆಯನ್ನು ಪ್ರಕಟಪಡಿಸಿ ಅವರಿಗೆ ಕೇಳಲೂ/ಹೇಳಲೂ ಅವಕಾಶ ಲಭಿಸುವಂತೆ ಎರಡು ವಾರಕ್ಕೊಮ್ಮೆ ಸಾಹಿತ್ಯ ಸಭೆ ನಡೆಸುವುದು.

**ಚಟುವಟಿಕೆ-1**

**ವಿಭಕ್ತಿ ಪ್ರತ್ಯಯ, ಅಕ್ಷರ ತಪ್ಪುಗಳನ್ನು ಗುರುತಿಸುವುದು.**

ಎಂಟನೇ ತರಗತಿಯ ಕಾಲು ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ವಿಶ್ಲೇಷಿಸಿದಾಗ ವಿದ್ಯಾರ್ಥಿಗಳು ವಿಭಕ್ತಿ ಪ್ರತ್ಯಯಗಳನ್ನು ಸರಿಯಾಗಿ ತಿಳಿಯದಿರುವುದು, ಹ್ರಸ್ವ-ದೀರ್ಘ, ಅಕ್ಷರಗಳನ್ನು ತಪ್ಪಾಗಿ ಬರೆದಿರುವುದು, ಕಾಗುಣಿತ ತಪ್ಪುಗಳನ್ನು ಮಾಡಿರುವುದು ಗಮನಕ್ಕೆ ಬಂದಿರುತ್ತದೆ. ವಿದ್ಯಾರ್ಥಿಗಳು ಈ ಕನ್ನಡ ಭಾಷಾ ಕಲಿಕೆಯಲ್ಲಿ ಮಾಡುವ ಈ ರೀತಿ ತಪ್ಪುಗಳನ್ನು ಸರಿಪಡಿಸಲು, ಕನ್ನಡ ಭಾಷಾ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಕೆಲವು ಚಟುವಟಿಕೆಗಳನ್ನು ದೈನಂದಿನ ತರಗತಿಯಲ್ಲಿ ನೆರವೇರಿಸಬೇಕಾಗಿದೆ. ವಿಭಕ್ತಿ ಪ್ರತ್ಯಯಗಳನ್ನು ಗುರುತಿಸುವ, ಹ್ರಸ್ವ-ದೀರ್ಘ ವ್ಯತ್ಯಾಸವನ್ನು ಕಂಡುಕೊಳ್ಳುವ ಕಾಗುಣಿತ ತಪ್ಪುಗಳನ್ನು ಸರಿಪಡಿಸುವುದಕ್ಕೆ ಪೂರಕವಾದ ಲೇಖನ ಭಾಗಗಳನ್ನು ನೀಡಿ
ಅದನ್ನು ವಿದ್ಯಾರ್ಥಿಗಳಿಂದ ಮಾಡಿಸುವುದು.

ಉದಾ:-ಇದು ವೈಜ್ಞಾನಿಕ ಯುಗ ಇಂದು ವಿಜ್ಞಾನವು ಪ್ರಪಂಚವನ್ನು ಮುನ್ನಡೆಸುತ್ತಿರುವ ಮಹಾ ಶಕ್ತಿಯಗಿದೆ. ವೈಜ್ಞಾನಿಕ ಸಂಶೋದನೆಗಳು ಜಗತ್ತನ್ನೇ ಕಿರಿದುಗೊಳಿಸಿದೆ. ವಿಜ್ಞಾನದಿಂದ ಮಾನವನ ಬದುಕಿಗ್ಗೆ ಹಲವರು ಕೊಡುಗೆಗಳು ಲಭಿಸಿವೆ. ಇದರಿಂದ ನಮ್ಮ ಪರಿಸರಕ್ಕೆ ಹನಿಯೂ ಆಗಿದೆ. ಕೆಲವು ವೈಜ್ಞಾನಿಕ ಉತ್ಪನ್ನಗಲ ದೆಸೆಯಿಂದ ಪರಿಸರದ ಕಗ ಮೃಗ ಮುಂತಾದ ಜೀವ ಜಲಗಳು ವಂಸ ನಾಸ ಬಿತಿಯಲ್ಲಿ ಬದುಕುವಂತಾಗಿದೆ. ಮಾನವನ ಅರೋಗ್ಯದ ಮೇಲೂ ವ್ಯತಿರಿಕ್ತ ಪರಿನಾಮವನ್ನು ಬೀರುತ್ತದೆ. ಇದು ಎಲ್ಲರೂ ಗಂಭೀರವಗಿ ಚಿಂತಿಸಬೇಕಾದ ವಿಚರವಾಗಿದೆ.

- ಈ ಲೇಖನ ಭಾಗದಲ್ಲಿ ವಿಭಕ್ತಿಗಳನ್ನು ಗುರುತಿಸುವುದು.
- ಹ್ರಸ್ವ- ಧೀರ್ಘ ತಪ್ಪುಗಳನ್ನು ಗುರುತಿಸಿ ಸರಿಪಡಿಸುವುದು.
- ಕಾಗುಣಿತ ತಪ್ಪುಗಳನ್ನು ಸರಿಪಡಿಸುವುದು.
- ಅಕ್ಷರ ತಪ್ಪುಗಳನ್ನು ಸರಿಪಡಿಸುವುದು.

ಗದ್ಯ ಭಾಗದಲ್ಲಿ ಅಡಿಗೆರೆ ಹಾಕಿದ ಪದ ಭಾಗಗಳನ್ನು ಗಮನಿಸಿ. ಇದನ್ನು ವಿಭಕ್ತಿ ಪ್ರತ್ಯಯಗಳೆನ್ನುವರು. ವಿಭಕ್ತಿ ಪ್ರತ್ಯಯಗಳ ಸೇರುವಿಕೆಯಿಂದ ಪರಿಪೂರ್ಣವಾದ, ಅರ್ಥವತ್ತಾದ ವಾಕ್ಯಗಳನ್ನು ರಚಿಸಲು ಸಾಧ್ಯವಾಗುತ್ತದೆ.

ವಿಭಕ್ತಿ ಪ್ರತ್ಯಯಗಳನ್ನು ಹೀಗೆ ಗುರುತಿಸಬಹುದಲ್ಲವೇ?

| | | | |
|---|---|---|---|
| ವಿಜ್ಞಾನವು | = ವಿಜ್ಞಾನ | + | ಉ |
| ಪ್ರಪಂಚವನ್ನು | = ಪ್ರಪಂಚ | + | ಅನ್ನು |
| ವಿಜ್ಞಾನದಿಂದ | = ವಿಜ್ಞಾನ | + | ಇಂದ |
| ಬದುಕಿಗೆ | = ಬದುಕು | + | ಗೆ |
| ಪರಿಸರಕ್ಕೆ | = ಪರಿಸರ | + | ಕೆ |
| ಉತ್ಪನ್ನಗಳ ದೆಸೆಯಿಂದ | = ಉತ್ಪನ್ನಗಳ | + | ದೆಸೆಯಿಂದ |
| ಪರಿಸರದ | = ಪರಿಸರ | + | ಅ |
| ಭೀತಿಯಲ್ಲಿ | = ಭೀತಿ | + | ಅಲ್ಲಿ |

**ವಿಭಕ್ತಿ ಪ್ರತ್ಯಯಗಳನ್ನು ಹೀಗೆ ಪಟ್ಟಿ ಮಾಡುವ**

1. ಉ
2. ಅನ್ನು
3. ಇಂದ
4. ಗೆ/ಕೆ
5. ದೆಸೆಯಿಂದ
6. ಅ
7. ಅಲ್ಲಿ

ಹೀಗೆ ವಿದ್ಯಾರ್ಥಿಗಳಿಗೆ ಲೇಖನ ಭಾಗಗಳನ್ನು ಕೊಟ್ಟು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಲು ಹೇಳುವುದು. ಇದಕ್ಕೆ ಸಂಬಂಧಿಸಿ ವಿವಿಧ ರೀತಿಯ ಚಟುವಟಿಕೆಗಳನ್ನು ನಡೆಸುವುದು.

**ಹ್ರಸ್ವ-ದೀರ್ಘ ತಪ್ಪುಗಳನ್ನು ಗುರುತಿಸಿ ಸರಿಪಡಿಸುವ.**

**ತಪ್ಪು - ಸರಿ**

- ವೈಜ್ಞನಿಕ - ವೈಜ್ಞಾನಿಕ
- ಮಹ - ಮಹಾ
- ಶಕ್ತಿಯಗಿದೆ - ಶಕ್ತಿಯಾಗಿದೆ
- ಮನವನ - ಮಾನವನ
- ಹಲವರು - ಹಲವಾರು

- ಹನಿಯೂ - ಹಾನಿಯೂ
- ಜೀವಜಲ - ಜೀವಜಾಲ
- ಅರೋಗ್ಯ - ಆರೋಗ್ಯ
- ವಿಚರ - ವಿಚಾರ

ಹೀಗೆ ಬೇರೊಂದು ಲೇಖನದಲ್ಲಿ ಹ್ರಸ್ವ-ದೀರ್ಘ, ತಪ್ಪುಗಳನ್ನು ನೀಡಿ, ವಿದ್ಯಾರ್ಥಿಗಳಿಂದ ಸರಿಪಡಿಸುವಂತೆ ಸೂಚಿಸುವುದು.

**ಕಾಗುಣಿತ ತಪ್ಪುಗಳನ್ನು ಸರಿಪಡಿಸುವ**

ಲೇಖನ ಭಾಗದಲ್ಲಿ ಕಾಗುಣಿತ ತಪ್ಪುಗಳಿವೆ ಅವುಗಳನ್ನು ಸರಿಪಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು.

- ತಪ್ಪು - ಸರಿ
- ಮುನಡೆ - ಮುನ್ನಡೆ
- ವೃಜ್ಞಾನಿಕ - ವೈಜ್ಞಾನಿಕ
- ಬೀರುತವೆ - ಬೀರುತ್ತವೆ

ಹೀಗೆ ಬೇರೊಂದು ಲೇಖನ ಭಾಗವನ್ನು ನೀಡಿ ಅದರಲ್ಲಿರುವ ಕಾಗುಣಿತ ತಪ್ಪುಗಳನ್ನು ಸರಿಪಡಿಸುವಂತೆ ಸೂಚಿಸುವುದು.

**ಅಕ್ಷರ ತಪ್ಪುಗಳನ್ನು ಸರಿಪಡಿಸುವ**

ಮೇಲಿನ ಲೇಖನ ಭಾಗದಲ್ಲಿ ಕೆಲವು ಪದಗಳಲ್ಲಿ ಅಕ್ಷರ ತಪ್ಪುಗಳಿವೆ ಅವುಗಳನ್ನು ಸರಿಪಡಿಸುವಂತಹ ಸೂಚಿಸುವುದು.

- ತಪ್ಪು - ಸರಿ
- ಕೆಳವು - ಕೆಲವು
- ಉತ್ಪನ್ನಗಲ - ಉತ್ಪನ್ನಗಳ
- ವಂಸ - ವಂಶ
- ನಾಸ - ನಾಶ
- ಪರಿನಾಮ - ಪರಿಣಾಮ

**ಅಲ್ಪಪ್ರಾಣ- ಮಹಾಪ್ರಾಣ ತಪ್ಪುಗಳನ್ನು ಸರಿಪಡಿಸುವ**

- ತಪ್ಪು - ಸರಿ
- ಸಂಶೋದನೆ - ಸಂಶೋಧನೆ
- ಬೀತಿ - ಭೀತಿ
- ಕಗ - ಖಗ

ಮೇಲಿನ ಲೇಖನ ಭಾಗದಲ್ಲಿ ಕೆಲವು ಪದಗಳಲ್ಲಿ ಅಕ್ಷರ ತಪ್ಪುಗಳಿವೆ ಅವುಗಳನ್ನು ಸರಿಪಡಿಸುವಂತೆ ಸೂಚಿಸುವುದು.

ಬರವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮಾಡುವ, ಸಂಭವನೀಯ ತಪ್ಪುಗಳನ್ನು ಒಂದು ಲೇಖನ ಭಾಗದ ಮೂಲಕ ಗಮನಕ್ಕೆ ತರಲಾಗಿದೆ. ಲೇಖನ ಭಾಗದಲ್ಲಿ ಬಂದಿರುವ ತಪ್ಪುಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿದೆ. ಹೀಗೆ ವಿದ್ಯಾರ್ಥಿಗಳಿಗೆ ಲೇಖನ ಭಾಗವನ್ನು ನೀಡಿ ತಪ್ಪುಗಳನ್ನು ಗುರುತಿಸಿ ಸರಿಪಡಿಸುವಂತೆ ಹೇಳುವುದು.

ಉದಾಹರಣೆಯಾಗಿ ಹೀಗೂ ಒಂದು ಗದ್ಯ ಭಾಗವನ್ನು ಕೊಟ್ಟು ವಿದ್ಯಾರ್ಥಿಗಳಿಂದ ಸರಿಪಡಿಸಿ ಬರೆಯಿಸುವುದು. ಬೇಕಾದ ನಿರ್ದೇಶನಗಳನ್ನು ಕೊಡುವುದು.

ಇತ್ತ ಕಾಡಿನ ನಿರಂತರವದ ಸಾದನೆಯಲ್ಲಿರುವ ಏಕಳವ್ಯನ ಬಳಿಗೆ ಅರ್ಜುನ ಹಾಗೂ ದ್ರೋನಾಚಾರ್ಯ ಬಂದನು. ಇವರನ್ನು ಕಂಡ ಏಕಲವ್ಯನು ಸಂತೋಷದ ಒಂದು ಕ್ಷನ ತನ್ನನ್ನು ತನೇ ನಂಬಳಾರದ ಸ್ತಿತಿಗೆ ಬಂದನು. ಕೂಡಲೇ ಚೆತರಿಸಿಕೊಂಡು ಅವರ ಪಾದಗಲಿಗೆ ವಂದಿಸಿದಣು. ಅಲ್ಲಿ ಮನ್ನಿನಿಂದ ತಯಾರಿಸಿದ ತನ ಮೂತಿ ಅದಕೆ ಹುವು ಹಣುಗಳ ಪೂಜೆ ಇದನೆಲಾ ಕಂಡು ಏನಿದು ವಿಚಿತ ಎಂದು ಕೇಳಿದನು. ಆಗ ಏಕಲವ್ಯನು ಅಚಾಯರೆ ಇದರಲೀ ವಿಚಿತ್ರವೇನು ಇಲ. ಇವರೆಗೆ ನಿಮ್ಮ ಮೂರ್ತಿಯನ್ನು ಆರಾದನೆ ಮಡಿ, ಸತತ ಸ್ರದ್ದೆಯಿಂದ ಅಪೂರ್ವವದ ಸರ ಶಂದಾನವನ್ನು ಕರಗತ ಮಾಡಿಕೊಂಡೆ. ಈಗ ನಿಮ ಪ್ರತ್ಯೇಕ ಕಾನುವ ಭಾಗ್ಯ ನನಕೊದಗಿದೆ. ಇದಕ್ಕಿಂತ ಬಾಗ್ಯ ಇನ್ನೇನೂ ಇಲ. ತನ ಸರ್ವಸವನ್ನೆಲ್ಲ ತಮಗೆ ಅರ್ಪಿಸಿದೇನೆ ಇಂದು ಹೇಲಿದನು. ಇದನು ಕಂಡ ದ್ರೋನಿಚಾರ್ಯ ಬಹಳ ಸಂತೋಸಪಟು ನಿನ್ನ ಸ್ರದ್ದೆ ಸಾಧನೆ ತಲೆತೋಗಿದ್ದೇನೆ. ನಿನ್ನ ಬದುಕು ವಿದ್ಯಾರ್ಥಿಗಲಿಗೆ ಮದರಿಯಾಗಲಿ ಎಂದು ತುಂಬ ಮನಸ್ಸು ಆಸೀರ್ವಾದ ಮಾಡಿದಳು.

ಮೇಲಿನ ಲೇಖನದಲ್ಲಿ ಭಾಷಾ ಪರವಾದ ವಿವಿಧ ರೀತಿಯ (ವಿಭಕ್ತಿ ಪ್ರತ್ಯಯ, ವಚನ, ಲಿಂಗ, ಹೃಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣ, ಕಾಗುಣಿತ) ತಪ್ಪುಗಳಿವೆ. ಅವುಗಳನ್ನು ಸರಿಪಡಿಸಿ ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು.

-ಸರಿಪಡಿಸಿ ಬರೆಯುವುದು.

**ಚಟುವಟಿಕೆ-2**

## ಪತ್ರ ಬರೆಯುವುದು

ಕಲಿಕೆಯಲ್ಲಿ ಹಿಂದುಳಿದ ಮತ್ತು ಖಾಸಗಿ ಪತ್ರದ ಸ್ವರೂಪದ ಕುರಿತು ತಿಳುವಳಿಕೆ ಕೊರತೆ ಇರುವ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವುದಕ್ಕಾಗಿ ಈ ಚಟುವಟಿಕೆಯನ್ನು ನಡೆಸುವುದು.

ಉದಾ:-

**ಮಾದರಿ_1: ಗೆಳತಿಗೆ ಪತ್ರ**

ದಿನಾಂಕ:11/11/2022

ಸ್ಥಳ : ಕಾಸರಗೋಡು

ಪ್ರೀತಿಯ ಗೆಳತಿಯಾದ ರಮ್ಯಳಿಗೆ ನಿನ್ನ ಗೆಳತಿಯಾದ ಸಂಚಿತ ಮಾಡುವ ವಂದನೆಗಳು. ನಾನು ಇಲ್ಲಿ ನನ್ನ ಅಭ್ಯಾಸದೊಂದಿಗೆ ಆರಾಮದಿಂದ ಇರುವೆನು. ನೀನು ಕೂಡಾ ಕ್ಷೇಮ ಎಂದು ಭಾವಿಸುವೆನು. ನಿನಗೂ ಮತ್ತು ಉಳಿದ ಎಲ್ಲ ಗೆಳೆಯರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು. ಈಗ ಪತ್ರ ಬರೆಯಲು ಕಾರಣವೇನೆಂದರೆ ನಮ್ಮ ಶಾಲೆಯ ವಾರ್ಷಿಕೋತ್ಸವವು ಬರುವ 23/1/2023 ರಂದು ನಡೆಯಲಿದೆ. ಅಂದು ಸಾಯಂಕಾಲ 6 ಗಂಟೆಗೆ ನಡೆಯಲಿರುವ ಈ ಕಾರ್ಯಕ್ರಮಕ್ಕೆ ಖ್ಯಾತ ಶಿಕ್ಷಣತಜ್ಞ ಗುರುರಾಜ ಕರ್ಜಕಿ ಆಗಮಿಸಲಿದ್ದಾರೆ. ಈ ಸಂದರ್ಭದಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣೆ ನಡೆಯಲಿದೆ. ಅನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ. ನಾನೂ ಕೂಡ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವೆ. ನಮ್ಮ ಈ ಕಾರ್ಯಕ್ರಮಕ್ಕೆ ನೀನು ತಪ್ಪದೇ ಬರಬೇಕೆಂದು ವಿನಂತಿಸುವೆನು.

ಇತೀ ನಿನ್ನ ಗೆಳತಿ

ಸಂಚಿತ

ವಿಳಾಸ :

ಇವರಿಗೆ

ವಾಗೀಶ ಎಂ.

೯ ನೇ ತರಗತಿ,

ಸರಕಾರಿ ಪ್ರಾಥಮಿಕ ಶಾಲೆ,

ವಿದ್ಯಾನಗರ

**ಮಾದರಿ_2: ಅಣ್ಣ ನು ತಮ್ಮನಿಗೆ ಪತ್ರ ಬರೆಯುವುದು.**

ದಿನಾಂಕ : 20-09-2021
ಸ್ಥಳ : ಕಾಸರಗೋಡು

ಪ್ರೀತಿಯ ತಮ್ಮ ವಿನಾಯಕನಿಗೆ ನಿನ್ನ ಅಣ್ಣನಾದ ಮಹೇಂದ್ರ ನ ಆಶೀರ್ವಾದಗಳು.
ನಾನು ಇಲ್ಲಿ ಕ್ಷೇಮ, ನೀನೂ ಕ್ಷೇಮವಾಗಿರುವೆಯೆಂದು ಭಾವಿಸುತ್ತೇನೆ. ನೀನು ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುವ ವಿಚಾರ ತಂದೆಯ ಪತ್ರದಿಂದ ತಿಳಿದು ತುಂಬ ಸಂತೋಷವಾಯಿತು. ರಾಜ್ಯಮಟ್ಟದ ಸ್ಪರ್ಧೆಯಲ್ಲೂ ನಿನಗೆ ಯಶಸ್ಸು ಲಭಿಸಲಿ. ಇದೇ ಅಕ್ಟೋಬರ್ 2 ರಂದು ನನ್ನ ಹುಟ್ಟುಹಬ್ಬವಿದೆ. ನನ್ನ ಎಲ್ಲಾ ಸ್ನೇಹಿತರನ್ನೂ ಹುಟ್ಟುಹಬ್ಬಕ್ಕೆ ಆಮಂತ್ರಿಸಿದ್ದೇನೆ. ನೀನೂ ತಪ್ಪದೆ ಬರಬೇಕು. ತಾಯಿಗೆ ನನ್ನ ಪ್ರಣಾಮಗಳನ್ನು ತಿಳಿಸು.

ಆಶೀರ್ವಾದಗಳೊಂದಿಗೆ
ನಿನ್ನ ಪ್ರೀತಿಯ ಅಣ್ಣ ಮಹೇಂದ್ರ

ವಿಳಾಸ :
ವಿನಾಯಕ
೧೦ ನೇ ತರಗತಿ, ಬಿ ವಿಭಾಗ
ಸರ್ಕಾರಿ ಪ್ರೌಢಶಾಲೆ
ಉದಯಗಿರಿ

ಮಕ್ಕಳ ಮುಂದೆ ಒಂದು ಖಾಸಗಿ ಪತ್ರ ಬರೆಯುವ ಪ್ರಶ್ನೆಯನ್ನು ಮುಂದಿಡುವುದು.
'ಶಾಲೆಯ ಎರಡನೇ ಅವಧಿಯ ಶುಲ್ಕವನ್ನು ಕಟ್ಟಲು 500 ರೂಪಾಯಿ ಕಳುಹಿಸಿಕೊಡುವಂತೆ ತಂದೆಗೆ ಮಗಳು ಪತ್ರವನ್ನು ಬರೆಯುವುದು.'

- ಮೇಲೆ ಹೇಳಿದ ಸೂಚನೆಯಂತೆ ಯಾವುದೇ ಪೂರಕ ಮಾಹಿತಿಗಳನ್ನು ಕೊಡದೆ ವೈಯಕ್ತಿಕವಾಗಿ ವಿದ್ಯಾರ್ಥಿಗಳು ಖಾಸಗಿ ಪತ್ರ ಬರೆಯುವುದು.
- ಬರೆದ ಮೇಲೆ ಅಧ್ಯಾಪಕರು ಎರಡು ಮಾದರಿ ಖಾಸಗಿ ಪತ್ರಗಳನ್ನು ಪ್ರೊಜೆಕ್ಟರ್ ನ ಮೂಲಕ ಪ್ರದರ್ಶಿಸುವುದು.

ಅಧ್ಯಾಪಕರಿಂದ ಕೆಲವು ಪ್ರಶ್ನೆಗಳು.
ನೀವು ಬರೆದ ಪತ್ರದ ಸ್ವರೂಪದಲ್ಲಿ ಮತ್ತು ಪ್ರದರ್ಶಿಸಿದ ಪತ್ರಗಳಲ್ಲಿ ಏನಾದರೂ ವ್ಯತ್ಯಾಸಗಳಿವೆಯೇ? (ಸ್ಥಳ, ತಾರೀಕುಗಳ, ನಮೂದಿಸುವಿಕೆ, ಸಂಬೋಧನೆ, ಕ್ಷೇಮ ಸಮಾಚಾರದ ವಿಚಾರ, ಮುಕ್ತಾಯ, ವಿಳಾಸ)

- ಪ್ರಶ್ನೆಯಲ್ಲಿ ಕೊಟ್ಟ ಪ್ರಧಾನ ಆಶಯದ ಉಲ್ಲೇಖ.

ವಿದ್ಯಾರ್ಥಿಗಳು ತಮ್ಮ ಬರವಣಿಗೆಯನ್ನು ಮಾದರಿ ಪತ್ರಗಳನ್ನು ನೋಡಿ ಕಂಡುಕೊಂಡ ದೋಷಗಳನ್ನು ಸರಿಪಡಿಸಿ, ಬೇರೊಂದು ಪರಿಷ್ಕರಿಸಿದ ಪತ್ರವನ್ನು ಬರೆಯುವುದು. ಕೆಲವರಿಂದ ಮಂಡನೆ.
ಅಧ್ಯಾಪಕರು ಬೇರೆ ವಿಚಾರಗಳನ್ನು ಕೊಟ್ಟು ಖಾಸಗಿ ಪತ್ರವನ್ನು ಮನೆಯಲ್ಲಿ ಬರೆದುಕೊಂಡು ಬರುವಂತೆ ಸೂಚಿಸುವುದು.

**ಚಟುವಟಿಕೆ-3**

**<u>ಹಿಟ್ಟಿನ ಋಣ ಕಥೆಯಲ್ಲಿ ಬಂದಿರುವ 'ಭಾಗಮ್ಮನ' ಪಾತ್ರ ಚಿತ್ರಣ :</u>**

8 ನೆ ತರಗತಿಯ ಕನ್ನಡ ಎ.ಟಿ ಯಲ್ಲಿ ಪಾತ್ರಚಿತ್ರಣಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ನೀಡಿರುವುದನ್ನು ಕಾಣುತ್ತೇವೆ. ಈ ಪ್ರಶ್ನೆಗೆ ಸಾಮಾನ್ಯ ಮಟ್ಟದಲ್ಲಿ ವಿದ್ಯಾರ್ಥಿಗಳು ಉತ್ತರವನ್ನು ಬರೆಯುತ್ತಾರೆ. ಆದರೂ ವಿದ್ಯಾರ್ಥಿಗಳ ಬರವಣಿಗೆಯಲ್ಲಿ ಭಾಷೆಯ ಶೈಲಿ, ವ್ಯಾಕರಣ ತಪ್ಪು, ಸರಿಯಾದ ಆಶಯವನ್ನು ಒಳಗೊಳ್ಳದೇ ಇರುವುದು. ಗುರುತಿಸಲ್ಪಟ್ಟ ಪಾತ್ರದ ಗುಣ ಸ್ವಭಾವವನ್ನು ಸರಿಯಾಗಿ ಗ್ರಹಿಸದೇ ಇರುವುದು ಮುಂತಾದ ಕೊರತೆಗಳನ್ನು ಕಾಣುತ್ತೇವೆ. ಅಕ್ಷರ ದೋಷ ಅಸಮರ್ಪಕ ವಾಕ್ಯರಚನೆ, ಪಾತ್ರಚಿತ್ರಣಕ್ಕೆ ನೀಡಿದ ಪಾತ್ರ ಸಂಬಂಧಿಸಿದ ಕಥೆಯಲ್ಲಿ ಚಿತ್ರಿತವಾದ ಬಗೆಯನ್ನು ಸರಿಯಾಗಿ ಗಮನಿಸದಿರುವಂತ ವಿಚಾರಗಳನ್ನು ಕಾಣುತ್ತೇವೆ.

ಪಾತ್ರಚಿತ್ರಣದಲ್ಲಿ ನಡೆಯುವ ಇಂತಹ ಲೋಪದೋಷಗಳನ್ನು ಗಮನದಲ್ಲಿಟ್ಟುಕೊಂಡು ಈ ರೀತಿಯ ಕೊರತೆಗಳನ್ನು ಸಾಕಷ್ಟು ನೀಗಿಸಿ ಒಂದು ಉತ್ತಮವಾದ ಪಾತ್ರಚಿತ್ರಣವನ್ನು ಹೇಗೆ ಮಾಡಲು ಸಾಧ್ಯ ಎಂದು ನೋಡೋಣ.

- ಹಿಟ್ಟಿನ ಋಣ ಕಥೆಯನ್ನು ತರಗತಿಯಲ್ಲಿ ಸಮರ್ಪಕವಾಗಿ ಪ್ರಕ್ರಿಯಾಧಾರಿತವಾಗಿ ಮಾಡುವುದು.

- ಭಾಗಮ್ಮನ ಪಾತ್ರಚಿತ್ರಣ ಚಟುವಟಿಕೆಯನ್ನು ತರಗತಿಯಲ್ಲಿ ಪ್ರಕ್ರಿಯಾಧಾರಿತವಾಗಿ ನೆರವೇರಿಸಲು ಮುಂದಾಗುವುದು. ಅದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಕಥೆಯಲ್ಲಿ ಬಂದಿರುವ ಪಾತ್ರಗಳನ್ನು ಗುರುತಿಸುವಂತೆ ಸೂಚಿಸುವುದು.

1. ಸಿಪಾಯಿ
2. ಭಾಗಮ್ಮ

ಎಂದು ಗುರುತಿಸುವುದು.

ಭಾಗಮ್ಮನ ಪಾತ್ರದ ಬಗೆಗೆ ವಿದ್ಯಾರ್ಥಿಗಳಿಂದ ಅಭಿಪ್ರಾಯಗಳನ್ನು ಕೇಳುವುದು.

- ಭಾಗಮ್ಮ ವಿಧವೆ ವೃದ್ದೆ.
- ಆಕೆ ಕರುಣಾಮಯಿ
- ಮಾತೃ ಹೃದಯಿ.
- ಸಂಪ್ರದಾಯವನ್ನು ಮೀರಿ ನಿಂತವಳು.
- ಇನ್ನೊಬ್ಬರ ಹಸಿವು ನೀರಡಿಕೆಯನ್ನು ಅರ್ಥಮಾಡಿಕೊಳ್ಳುವವಳು.
- ಇಳಿ ವಯಸ್ಸಿನಲ್ಲಿ ತನಗೆ ಸಿಕ್ಕಿದ ಕಾಣಿಕೆಯನ್ನು ನಿಷ್ಪ್ರಯೋಜಕ ಎಂದು ತಿಳಿದರೂ ನೀಡಿದ ವ್ಯಕ್ತಿಗೆ ನೋವಾಗಬಾರದು ಎಂದು ಅದನ್ನು ಸ್ವೀಕರಿಸಿವಂತಹ ಹೃದಯ ಶ್ರೀಮಂತಿಕೆ ಉಳ್ಳವಳು.

**ಮಾದರಿ ಪಾತ್ರ ಚಿತ್ರಣ:**

ರತ್ನಾ ಮೂರ್ತಿಯವರು ರಚಿಸಿದ ಹಿಟ್ಟಿನ ಋಣ ಕತೆಯಲ್ಲಿ ಬರುವ ಪ್ರಮುಖ ಪಾತ್ರಗಳಲ್ಲಿ ಭಾಗಮ್ಮ ಒಬ್ಬಳು. ಭಾಗಮ್ಮ ಸುಮಾರು 60-70 ವಯಸ್ಸಿನ ವೃದ್ಧೆ. ಆಕೆ ವಿಧವೆಯಾಗಿದ್ದಳು. ದಾಹ, ಹಸಿವು, ಪ್ರಯಾಣದ ಆಯಾಸದಿಂದ ಬಳಲಿ ಬಂದ ಸೈನಿಕ ಬಾಯಾರಿಕೆಯಾಗಿ ನೀರು ಕೇಳಿದಾಗ ಆತನಿಗೆ ಹಸಿವೆಯಾಗಿದೆ ಎಂದು ಅರ್ಥೈಸಿಕೊಂಡು ಬಾಯಾರಿಕೆಗೆ ನೀರು, ಹಸಿವೆಗೆ ಹಿಟ್ಟನ್ನು ನೀಡಿ ಸೈನಿಕನನ್ನು ಉಪಚರಿಸಿದ ಕರುಣಾಮಯಿ ಭಾಗಮ್ಮ. ಭಾಗಮ್ಮ ಮಾತೃ ಹೃದಯಿ, ಹಸಿದು ಬಂದವರಿಗೆ ಏನಾದರೂ ಕೊಟ್ಟು ಹಸಿವು ನೀಗಿಸಬೇಕೆಂಬ ಆಕೆಯ ಗುಣ ಓದುಗರನ್ನು ತನ್ಮಯಗೊಳಿಸುತ್ತದೆ. ಭಾಗಮ್ಮ ಮೇಲ್ಜಾತಿಗೆ ಸೇರಿದವಳೂ, ಸಂಪ್ರದಾಯಸ್ಥಳೂ ಆಗಿದ್ದರೂ ಹಸಿದು ಬಂದ ಅನ್ಯ ಜಾತಿಯ ಸಿಪಾಯಿಯೊಬ್ಬನಿಗೆ ಬಾಯಾರಿಕೆಗೆ ನೀರು, ಹಸಿವಿಗೆ ಹಿಟ್ಟು ನೀಡಿ ಉಪಚರಿಸಿವಾಗ ಜಾತಿ ಸಂಪ್ರದಾಯಗಳು ಯಾವುದೂ ಆಕೆಗೆ ತೊಡಕಾಗುವುದಿಲ್ಲ. ಬಳಲಿ ಬಂದ ಸಿಪಾಯಿಯನ್ನು 'ಒಳಗೆ ಬಾಪ್ಪ' ಎಂದು ಮನೆಯೊಳಗೆ ಕರೆದು ಶುಭ್ರ ಹಿತ್ತಾಳೆಯ ತಂಬಿಗೆಯಲ್ಲಿ ನೀರನ್ನು ನೀಡುವುದು ಭಾಗಮ್ಮನು ಸಂಪ್ರದಾಯವನ್ನು ಮೀರಿ ನಿಲ್ಲುವುದನ್ನು ತೋರಿಸುತ್ತದೆ. ದಾಹ ಮತ್ತು ಹಸಿವೆಗೆ ಯಾವ ಜಾತಿ ಸಂಪ್ರದಾಯವು ಇಲ್ಲ ಎಂದು ಈ ಸಮಾಜಕ್ಕೆ ತೋರಿಸಿ ಕೊಡುವುದರ

ಮೂಲಕ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುತ್ತಾಳೆ. ತನ್ನ ಬಳಿಗೆ ದಾಹ ನೀಗಿಸಲು ನೀರು ಕೇಳಿ ಬಂದ ಸಿಪಾಯಿ ಭಾಗಮ್ಮನಿಗೆ ಯಾವುದೇ ಜಾತಿ ಧರ್ಮದ ಸಂಕೇತವಾಗಿಯೋ ಪ್ರತಿನಿಧಿಯಾಗಿಯೋ ಗೋಚರವಾಗುವುದಿಲ್ಲ ಅಥವಾ ಸಂಪ್ರದಾಯಕ್ಕೆ ಮೈಲಿಗೆಯನ್ನು ತಂದೊಡ್ಡುವ ವ್ಯಕ್ತಿಯಾಗಿಯೂ ಕಾಣುವುದಿಲ್ಲ. ಬದಲಾಗಿ ಭಾಗಮ್ಮನ ದೃಷ್ಟಿಯಲ್ಲಿ ಸಿಪಾಯಿ ಜಾತಿ, ಧರ್ಮ ಸಂಪ್ರದಾಯಕ್ಕೆ ಅತೀತವಾದ ಮನುಷ್ಯ ಜೀವಿಯಾಗಿ ಮಾತ್ರ ಕಾಣುತ್ತಾನೆ. ಬಂದ ಸಿಪಾಯಿಗೆ ಹಸಿವು ಆಗಿದೆ ಎಂಬುದನ್ನು ಮನಗಂಡು ತನ್ನಲ್ಲಿ ಉಳಿದಿರುವ ಹಿಟ್ಟು ಮತ್ತು ಹುಳಿಯನ್ನು ನೀಡಿ ಆತನ ಹಸಿವೆಯನ್ನು ನೀಗಿಸಿದ ಮಮತಾಮಯಿ ಮಾತೆಯಾಗಿಯೂ ಕರುಣಾಮಯಿಯಾಗಿಯೂ ಕಾಣುತ್ತಾಳೆ. ಅದಕ್ಕಿಂತ ಮೇಲಾಗಿ ಭಾಗಮ್ಮ ಮನುಷ್ಯತ್ವದ ಪ್ರತೀಕವಾಗುತ್ತಾಳೆ. ಅನೇಕ ವರ್ಷಗಳ ಬಳಿಕ ಭಾಗಮ್ಮ ವಯೋಸಹಜವಾಗಿ ನಿಶಕ್ತಳಾದ ಸಮಯದಲ್ಲಿ ಸಿಪಾಯಿ ಆಕೆಯನ್ನು ಹುಡುಕಿಕೊಂಡು ಬಂದಾಗ ಮತ್ತೊಮ್ಮೆ ಆತನಿಗೆ ಸಂತೋಷದಿಂದಲೇ ಹಿಟ್ಟನ್ನು ನೀಡಿ ಸತ್ಕರಿಸುತ್ತಾಳೆ. ಅನೇಕ ವರ್ಷಗಳ ಹಿಂದೆ ಬಳಲಿ ಬಂದ ಆತನಿಗೆ ನೀರು ಮತ್ತು ಹಿಟ್ಟನ್ನು ನೀಡಿ ಹಸಿವು ಬಾಯಾರಿಕೆಯನ್ನು ತಣಿಸಿ ಕರುಣೆ ತೋರಿದ ಆ ವೃದ್ಧೆಗೆ ಕಿರು ಕಾಣಿಕೆಯನ್ನು ನೀಡಿದಾಗ ಕಾಲನ ಕರೆಯ ಹಾದಿ ಕಾಯುತ್ತಿದ್ದ ಭಾಗಮ್ಮ ಅದರಿಂದ ಉಬ್ಬಿ ಹೋಗುವುದೇ ಇಲ್ಲ. ಇನ್ನೂ ಸಿಪಾಯಿ ನೀಡಿದ ಕಾಣಿಕೆಯಿಂದ ಯಾವ ಪ್ರಯೋಜನವು ಇಲ್ಲ ಎಂದು ಭಾಗಮ್ಮನಿಗೆ ಅರಿವಿದ್ದರೂ ಆತನಿಗೆ ನೋವಾಗಬಾರದೆಂದು ಅದನ್ನು ಸ್ವೀಕರಿಸುತ್ತಾಳೆ. ಆತನನ್ನು ಸಂತೋಷದಿಂದಲೇ ಹಾರೈಸುತ್ತಾಳೆ. ಆ ಮೂಲಕ ತನ್ನ ಹೃದಯವಂತಿಕೆಯನ್ನು ತೋರಿಸುತ್ತಾಳೆ. ಒಟ್ಟಿನಲ್ಲಿ ಭಾಗಮ್ಮ ಕರುಣಾಮಯಿಯಾಗಿ ಮಾತೃ ಹೃದಯಿಯಾಗಿ ಹಸಿವಿನ ಮುಂದೆ ಜಾತಿ, ಮತ, ಧರ್ಮ, ಸಂಪ್ರದಾಯ ಯಾವುದೂ ಇಲ್ಲ ಎಂಬುದನ್ನು ತೋರಿಸಿ ಕೊಡುತ್ತಾಳೆ.

ಮೇಲಿನ ಮಾದರಿ ಪಾತ್ರ ಚಿತ್ರಣದಂತೆ 'ವಿಶೇಷ ಬಹುಮಾನ' ಪಾಠದಲ್ಲಿ ಬರುವ ತಪನ್ ಎಂಬ ಹುಡುಗನ ಗುಣ, ಸ್ವಭಾವವನ್ನು ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಹೇಳಿಸಿ, ಪಾತ್ರ ಚಿತ್ರಣವನ್ನು ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸುವುದು.

**ಚಟುವಟಿಕೆ - 4**

## ಜೀವನ ಚರಿತ್ರೆಯನ್ನು ಆತ್ಮಕಥೆಯಾಗಿ ಪರಿವರ್ತಿಸಿರಿ.

### ಸರ್ದಾರ್ ವಲ್ಲಭಭಾಯಿ ಪಟೇಲ

ವಲ್ಲಭಭಾಯಿ ಪಟೇಲ್ ಅವರು 1875 ರ ಅಕ್ಟೋಬರ್ 31 ರಂದು ಗುಜರಾತಿನ ನಾಡಿಯಾಡ್‌ನಲ್ಲಿ ಜನಿಸಿದರು. ಇವರದು ರೈತ ಕುಟುಂಬ. ಪಟೇಲರು ಪ್ಲೀಡರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಕೀಲರಾದರು. ನಂತರ ಬ್ಯಾರಿಸ್ಟರ್ ಆದ ಅವರು ಅಹಮದಾಬಾದಿನಲ್ಲಿ ಖ್ಯಾತ ಕ್ರಿಮಿನಲ್ ವಕೀಲರೆಂದು ಹೆಸರಾದರು. 1917 ರಲ್ಲಿ ಪುರಸಭೆಯ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶಿದರು.

ಪಟೇಲರು 1919 ರಲ್ಲಿ ರೌಲಟ್ ಬಿಲ್ ಗೆ ವಿರುದ್ಧವಾಗಿ ಪ್ರದರ್ಶನಗಳನ್ನು ಸಂಘಟಿಸಿದರು. ಅಸಹಕಾರ ಚಳುವಳಿಯಲ್ಲಿ ಸೇರಿದ ಅವರು ಗುಜರಾತಿನ ವಿದ್ಯಾಪೀಠ ಸ್ಥಾಪನೆಗಾಗಿ ಬಹಳಷ್ಟು ಶ್ರಮಿಸಿದರು. ಸತ್ಯಾಗ್ರಹ ಎಂಬ ಪತ್ರಿಕೆಯನ್ನು ಹೊರಡಿಸಿದರು. ಬಾರ್ಕೋಲಿಯ ರೈತರ ಚಳುವಳಿಯಲ್ಲಿ ನಾಯಕತ್ವ ವಹಿಸಿದ್ದರಿಂದ ಬಾಪೂಜೀ ಅವರಿಂದಲೇ ಸರ್ದಾರ್ ಎಂಬ ಖ್ಯಾತಿ ಪಡೆದರು. 1931 ರಲ್ಲಿ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದರು.

ಸ್ವತಂತ್ರ ಭಾರತದ ಉಪಪ್ರಧಾನಿಯಾಗಿದ್ದ ಪಟೇಲರು ನೆಹರು ಸಂಪುಟದಲ್ಲಿ ಗೃಹ ಮಂತ್ರಿಯಾಗಿಯೂ ಕಾರ್ಯ ನಿರ್ವಹಿಸಿದರು. ಅವರು ದೇಶೀಯ ಸಂಸ್ಥಾನಗಳ ವಿಲೀನಗೊಳಿಸುವ ಬಹಳ ಕಷ್ಟಕರವಾದ ಸಮಸ್ಯೆಯನ್ನು ಸಮರ್ಥ ರೀತಿಯಿಂದ ನಿರ್ವಹಿಸಿದರು.

## ಆತ್ಮಕಥೆಯನ್ನು ಜೀವನ ಚರಿತ್ರೆಯಾಗಿ ಪರಿವರ್ತಿಸಿರಿ.

### ಕಯ್ಯಾರ ಕಿಞ್ಞಣ್ಣ ರೈ

ಗೋಕರ್ಣದಲ್ಲಿ ನಾನು ಆಸಕ್ತಿ ವಹಿಸಿದ ಇನ್ನೊಬ್ಬ ಉನ್ನತ ವ್ಯಕ್ತಿ ಗೌರೀಶ ಕಾಯ್ಕಿಣಿಯವರು; ಅವರನ್ನು ಅವರ ಗೋಕರ್ಣದ ಮನೆಯಲ್ಲಿಯೇ ಕಂಡಿದ್ದೇನೆ. ರಾಷ್ಟ್ರೀಯ ರಾಜಕಾರಣದಲ್ಲೂ ಆಸಕ್ತರಾಗಿರುವ ಅವರ ಪತ್ನಿಯವರನ್ನೂ ನೋಡಿ ಅಭಿಮಾನಗೊಂಡಿದ್ದೇನೆ. ಇಂದು ಪರಂಪರೆಯನ್ನು ಮುಂದುವರಿಸುತ್ತಿರುವ ಅವರ ಪುತ್ರ ಜಯಂತ ಕಾಯ್ಕಿಣಿಯವರ ಕುರಿತೂ ಮೆಚ್ಚುಗೆಯಿದೆ. 1969 ರಲ್ಲಿ ನಾನು ಬರೆದು ಪ್ರಕಟಿಸಿದ ನನ್ನ 'ಚೇತನ' ಕವನ ಸಂಕಲನವನ್ನು 'ಜನಸೇವಕ' ಪತ್ರಿಕೆಗೆ ವಿಮರ್ಶೆಗೆ ಕಳುಹಿಸಿದಾಗ, ಗೌರೀಶರು ಅದನ್ನು ವಿಮರ್ಶಿಸುತ್ತಾ, ನನ್ನನ್ನು ''ಕರಾವಳಿಯ ಮಹಾಕವಿ” ಎಂದು ಆಶೀರ್ವದಿಸಿದರು.

ಇತ್ತೀಚೆಗೆ ಗೌರೀಶರಿಗೆ ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಬಿರುದು ನೀಡಿತು; ಅವರನ್ನು ಅಭಿನಂದಿಸಲು ಅಂಕೋಲೆಯಲ್ಲಿ ವಿಷ್ಣು ನಾಯ್ಕರು ಏರ್ಪಡಿಸಿದ ಸಮಾರಂಭಕ್ಕೆ ಅಧ್ಯಕ್ಷತೆ ವಹಿಸಲು ನನ್ನನ್ನು ಕರೆದಂತೆ, ಸಂತೋಷದಿಂದ ಒಪ್ಪಿದೆ ವಯಸ್ಸಿನಿಂದಲೂ, ಯೋಗ್ಯತೆಯಿಂದಲೂ ನನಗಿಂತ ಹಿರಿಯರಾದ ಗೌರೀಶರನ್ನು ಅಭಿನಂದಿಸುವ ಸಮಾರಂಭದಲ್ಲಿ ಅಧ್ಯಕ್ಷನಾಗುವುದು ಪಡೆದುಬಂದ ಭಾಗ್ಯವೆಂದೇ ಭಾವಿಸಿದೆ. ಕಾಯ್ಕಿಣಿ ದಂಪತಿಗಳನ್ನು ಪ್ರೊ ನಾಯಕರನ್ನೂ, ಇತರ ಹಿರಿಯ ಕಿರಿಯ ಅಲ್ಲಿನ ಸಾಹಿತ್ಯ ಪ್ರೇಮಿಗಳನ್ನೂ ಅಲ್ಲಿ ಕಂಡು ಮಾತನಾಡಿದೆ. ವಿಷ್ಣು ನಾಯ್ಕರ ಮನೆಯಲ್ಲಿಯೇ ಜರುಗಿದ ಆ ಸಮಾರಂಭ ತುಂಬಾ ಆತ್ಮೀಯವಾಗಿತ್ತು.

- ಮೇಲಿನ ಜೀವನ ಚರಿತ್ರೆ ಹಾಗೂ ಆತ್ಮಕಥೆಯ ಭಾಗವನ್ನು ವಿದ್ಯಾರ್ಥಿಗಳಿಂದ ಓದಲು ಹೇಳುವುದು.
- ಜೀವನ ಚರಿತ್ರೆ ಹಾಗೂ ಆತ್ಮಕಥೆಗಳೊಳಗಿನ ವ್ಯತ್ಯಾಸವನ್ನು ಅಧ್ಯಾಪಕರು ತಿಳಿಸುವುದು.
- ವಿದ್ಯಾರ್ಥಿಗಳಿಂದ ಪರಿವರ್ತಿಸಿ ಬರೆಯಲು ಸೂಚಿಸುವುದು.